**NP – 019**

## IV Semester B.Com. Examination, July/August 2024
## (NEP Scheme)
### ಕನ್ನಡ ಭಾಷಾ ಪತ್ರ
### ಪತ್ರಿಕೆ – 4 : ವಾಣಿಜ್ಯ ಕನ್ನಡ - 4

ಸಮಯ : 2½ ಗಂಟೆಗಳು                                                  ಗರಿಷ್ಠಾಂಕಗಳು : 60

I. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (200 ಪದಗಳಿಗೆ ಮೀರದಂತೆ) **(2×10=20)**

1) ಯೂಲಿಸಿಸ್ ಮತ್ತು ಅವನ ಸಂಗಡಿಗರು ರಾಕ್ಷಸನಿಂದ ಪಾರಾಗಿ ಬಂದ ಬಗೆ ಕುರಿತು ಬರೆಯಿರಿ.

2) ಕರ್ಣ ಮತ್ತು ಕುಂತಿಯರ ಮಾತುಕತೆಯನ್ನು ವಿವರಿಸಿ.

3) ಬಂಡವಾಳಶಾಹಿ ವ್ಯವಸ್ಥೆ ಹೇಗೆ ಎಲ್ಲವನ್ನೂ 'ಸರಕನ್ನಾಗಿ' ಮಾಡುತ್ತದೆ ? ವಿವರಿಸಿ.

II. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (100 ಪದಗಳಿಗೆ ಮೀರದಂತೆ) **(4×5=20)**

1) ಬುಡೇನ್ ಸಾಬಿಯು ಎದುರಿಸಿದ ಸಾಲದ ಸಮಸ್ಯೆಯನ್ನು ವಿವರಿಸಿ.

2) ಶ್ರೀಮತಿ ವಜ್ರಜಂಘರ ಕತೆಯನ್ನು ಕುರಿತು ಬರೆಯಿರಿ.

3) ಸ್ವಾತಂತ್ರ್ಯಕ್ಕಿಂತ ಮುಂಚೆ ಪೊಲೀಸ್ ಅಧಿಕಾರಿಗಳ ನೇಮಕಾತಿ ಹೇಗೆ ಆಗುತ್ತಿತ್ತು ? ವಿವರಿಸಿ.

4) ಕ್ಯಾನ್ಸರ್ ರೋಗಿಯ ಬಗೆಗೆ ಜನ ತೋರುವ ಪ್ರತಿಕ್ರಿಯೆ ಯಾವ ರೀತಿಯದು ? ವಿವರಿಸಿ.

5) ಪ್ರಸನ್ನ ಅವರು ಹೇಳುವ ಗ್ರಾಮೀಣ ಬಡತನ ಯಾವ ಬಗೆಯದು ? ತಿಳಿಸಿ.

6) ದುರ್ಯೋಧನನ ಬಗೆಗೆ ಕರ್ಣನ ನಿಷ್ಠೆ ಯಾವ ರೀತಿ ವ್ಯಕ್ತವಾಗಿದೆ ? ಚಿತ್ರಿಸಿ.

III. ಕೆಳಕಂಡ ಕಂಡಿಕೆಯನ್ನು ಇಂಗ್ಲೀಷಿಗೆ ಭಾಷಾಂತರಿಸಿ. **(1×4=4)**

ಮನುಷ್ಯ ಪ್ರಾಣಿಯ ಸ್ವಾರ್ಥದಿಂದ ತಲೆಕೆಟ್ಟು ಹುಚ್ಚು ಹಿಡಿದಂತಾದರೆ ಕಡಲ ದಂಡೆಯ ಮೇಲಿನ ಪ್ರಾಂತ್ಯವೊಂದನ್ನೇ ಆಕೆ ನುಂಗಿಬಿಡಬಹುದು. ತನ್ನ ಒಡಲನ್ನೇ ಬಗೆದು ದೈತ್ಯ ಸುನಾಮಿ ಅಲೆಗಳನ್ನು ಕಡಲ ಸೆರಗತ್ತ... ಮೈಲುಗಟ್ಟಲೆ ದೂರಕ್ಕೆ ಅಟ್ಟಿ ಇಡೀ ಊರಿಗೆ ಊರನ್ನೇ ಲಯ ಮಾಡಬಹುದು. ಈ ಅಪಾಯ ನಮಗೆ ಬಹಳ ದೂರವೇನಿಲ್ಲ. ಹೌದು, ಕಡಲು ನೆಲದ ಮಧ್ಯೆ ಇರುವ ನೈಸರ್ಗಿಕ ಹೊಂದಾಣಿಕೆಯ ಷರತ್ತುಗಳು, ಈ ನೆಲದ ಮೇಲಿನ ಸ್ವಾರ್ಥದ ಮನಗಳಿಂದಾಗಿ ಯಾವ ಕ್ಷಣದಲ್ಲಾದರೂ ಬಿದ್ದು ಹೋಗಬಹುದು. ಈ ಷರತ್ತುಗಳನ್ನು ನಿಯಂತ್ರಿಸುವ ಶಕ್ತಿ ಇರುವುದು ತನಗೆ, ಅತೀವ ಆಲೋಚನಾಶಕ್ತಿ ಇದೆ ಎಂದು ಬೀಗುವ ಮನುಷ್ಯನಲ್ಲಿ ಅಲ್ಲ... ನಿಸರ್ಗದಲ್ಲಿ ಮಾತ್ರ.

P.T.O.

IV. ಒಂದು ಕಾಲ್ಪನಿಕ ಹೆಸರಿನ ಕಂಪನಿಯೊಂದರ ಅಕೌಂಟೆಂಟ್ ಹುದ್ದೆಗೆ ಅಭ್ಯರ್ಥನ ಪತ್ರ ಬರೆಯಿರಿ. **(1×4=4)**

V. ಕೆಳಕಂಡ ಚಿತ್ರ/ಸನ್ನಿವೇಶ ಗಮನಿಸಿ **ಒಂದು** ಕತೆ ಅಥವಾ ಕವಿತೆ ಬರೆಯಿರಿ. **(1×4=4)**

ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು.

VI. ಕೆಳಕಂಡ ಗದ್ಯಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ. **(1×4=4)**

ನಡುರಾತ್ರಿಯಲ್ಲೆದ್ದ ಈ ದೈತ್ಯನ ಭೀಕರ ಅರಚಾಟ ಕೇಳಿ ಆ ದ್ವೀಪದ ಬೇರೆ ಬೇರೆ ಗುಹೆಗಳಲ್ಲಿ ವಾಸವಾಗಿದ್ದ ಇತರ ಒಕ್ಕಣ್ಣಿನ ದೈತ್ಯರು ನಿದ್ದೆಗೆಟ್ಟು ಎದ್ದು ಬಂದು ಗುಹೆಯ ಹೊರಗೆ ನಿಂತು "ನಿನಗೇನಾಗಿದೆ ಪಾಲಿಫೀಮಸ್ ? ನಡುರಾತ್ರಿ ವೇಳೆ ಹೀಗೇಕೆ ಅಬ್ಬರ ಮಾಡುತ್ತ ನಮ್ಮ ನಿದ್ದೆ ಕೆಡಿಸುತ್ತೀಯೆ ? ಯಾರಾದರೂ ಕಳ್ಳರು ಬಂದು ನಿನ್ನ ಕುರಿ ಕದ್ದರೆ ? ಅಥವಾ ನಿನ್ನನ್ನು ಕೊಲ್ಲಬೇಕೆಂದು ಯಾರಾದರೂ ಮೇಲೆ ಬಿದ್ದರೆ ?" ಎಂದು ಕೂಗಿ ಕೇಳಿದರು. "ಇಲ್ಲಪ್ಪ ! ಇಲ್ಲಪ್ಪ !" ಎಂದು ನೋವಿನ ನಡುವೆಯೇ ನರಳುತ್ತ ಪಾಲಿಫೀಮಸ್ ಕೂಗಿಕೊಂಡ. "ಓ ! ಹೀಗೋ ಯಾರೂ ಇಲ್ಲಪ್ಪ ಎಂದ ಮೇಲೆ ಸುಮ್ಮಸುಮ್ಮನೆ ಹೀಗೆ ಕೂಗಿಕೊಳ್ಳಲು ನಿನಗೇನೋ ರೋಗ ಬಡಿದಿರಬೇಕು ! ಇದೆಲ್ಲ ಆ ಜ್ಯೂಸ್ ದೇವನ ಕೆಲಸ ಎಂದು ಕಾಣುತ್ತದೆ. ನಿಮ್ಮಪ್ಪ ಪೊಸೈಡನ್ ದೇವತೆಯನ್ನು ಬೇಡಿಕೊ" ಎಂದು ಹೇಳುತ್ತ ಅವರೆಲ್ಲ ಹೊರಟು ಹೋದರು.

VII. ಇವುಗಳಿಗೆ **ಒಂದೊಂದು** ಸರಿ ಉತ್ತರವನ್ನು ಗುರ್ತಿಸಿ ಬರೆಯಿರಿ. (**ನಾಲ್ಕು** ಪ್ರಶ್ನೆಗಳಿಗೂ ಉತ್ತರಿಸಿ) **(4×1=4)**

1) ಫಣಿಕೇತು ಎಂದರೆ ಯಾರು ?

ಎ) ಕರ್ಣ ಬಿ) ದುರ್ಯೋಧನ

ಸಿ) ಕೃಷ್ಣ ಡಿ) ವಿದುರ

2) ಜಗತ್ತು ಮಿಥ್ಯೆ ಎಂದವರು ಯಾರು ?

ಎ) ಬಸವಣ್ಣ ಬಿ) ರಾಮಾನುಜಾಚಾರ್ಯರು

ಸಿ) ಆದಿಶಂಕರರು ಡಿ) ಸರ್ವಜ್ಞ

3) 'ದಿ ಲಾಸ್ಟ್ ಲೆಕ್ಚರ್' ಕೃತಿಯ ಲೇಖಕರು ಯಾರು ?

ಎ) ಬರ್ನಾಡ್ ಷಾ ಬಿ) ರ್‍ಯಾಂಡಿ ಪಾಶ್

ಸಿ) ವರ್ಡ್ಸ್‌ವರ್ತ್ ಡಿ) ಅಬ್ದುಲ್ ಕಲಾಂ

4) ಭಾರತದಲ್ಲಿ ಕೇಂದ್ರ ಲೋಕಸೇವಾ ಆಯೋಗ ಸ್ಥಾಪನೆಯಾದ ವರ್ಷ

ಎ) 1951 ಬಿ) 1946

ಸಿ) 1949 ಡಿ) 1919